ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 4972

ಸದಸ್ಯರ ಹೆಸರು : ಶ್ರೀಮತ ನಾಗಮಣಿ ಎ.ಕೆ. (ಕಿರುಗಾವಲು)

ಉತ್ತರಿಸಬೇಕಾದ ದಿನಾಂಕ : 11–07–2005

ಉತ್ತರಿಸುವ ಸಚಿವರು : ಬೃಹತ್ ಮಧ್ಯಮ ಮತ್ತು ಸಣ್ಣ ಕೈಗಾರಿಕೆ ಗಳ ಹಾಗೂ ಮೂಲಭೂತ ಸೌಲಭ್ಯಗಳ ಸಚಿವರು,

(ಲೋಕೋಪಯೋಗಿ ಮತ್ತು ಇಂಧನ ಸಚಿವರ ಪರವಾಗಿ)

ಪ್ರಶ್ನೆ ಸಂಖ್ಯೆ : 398(4972)

	ಪ್ರಶ್ನೆ	ಉತ್ತರ
ಅ	ಮಂಡ್ಯ ಜಿಲ್ಲೆಯಲ್ಲಿ ಮಳೆ ಮತ್ತು ಬಿರುಗಾಳಿಯಿಂದ ವಿದ್ಯುತ್ ಕಂಬಗಳಿಗೆ ಹಾನಿಯಾಗಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ:	ಅ) ಮಂಡ್ಯ ಜಿಲ್ಲೆಯಲ್ಲಿ ಇತ್ತೀಚೆಗೆ ಬಿದ್ದ ಮಳೆ ಹಾಗೂ ಬೀಸಿದ ಬಿರುಗಾಳಿ ಯಿಂದ ವಿದ್ಯುತ್ ಕಂಬಗಳಿಗೆ ಹಾನಿ ಯಾಗಿರುವ ವಿಷಯವು ಮಂಡ್ಯ ಜಿಲ್ಲೆಯು ವ್ಯಾಪ್ತಿಯಲ್ಲಿರುವ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮದ ಗಮನಕ್ಕೆ ಬಂದಿದೆಯೇ:
ಆ	ಬಂದಿದ್ದಲ್ಲಿ ಈ ಬಗೆಗೆ ಯಾವ ಕ್ರಮ ತೆಗೆದುಕೊಳ್ಳಲಾಗಿದೆ;	ಅ) ಮಂಡ್ಯ ಜಿಲ್ಲೆಯಲ್ಲಿ ಇತ್ತೀಚೆಗೆ ಬಿದ್ದ ಮಳೆ ಹಾಗೂ ಬಿರುಗಾಳಿಯಿಂದ ಒಟ್ಟು 332 ಕಂಬಗಳು ಬಿದ್ದಿದ್ದು, ಈ ಎಲ್ಲಾ 332 ಕಂಬಗಳನ್ನು ಸಮರೋಪಾದಿಯಲ್ಲಿ ಬದಲಾಯಿಸಲಾಗಿರುತ್ತದೆ. ಬದಲಾಯಿಸಲಾದ ವಿದ್ಯುತ್ ಕಂಬಗಳ ಕ್ಷೇತ್ರವಾರು ವಿವರಗಳು ಈ ಕೆಳಕಂಡಂತಿವೆ :–

ಇ	ಇದುವರೆಗೆ ಎಷ್ಟು ವಿದ್ಯುತ್ ಕಂಬಗಳನ್ನು ಬದಲಾವಣೆ ಮಾಡಲಾಗಿದೆ ; (ಕ್ಷೇತ್ರವಾರು ವಿವರಣೆ ನೀಡುವುದು);	

ಕ್ರ.ಸಂ.	ಕ್ಷೇತ್ರಗಳ ಹೆಸರು	ಬದಲಾಯಿಸಲಾದ ವಿದ್ಯುತ್ ಕಂಬಗಳ ಸಂಖ್ಯೆ
1	ಮಂಡ್ಯ	51
2	ಮದ್ದೂರು	59
3	ಮಳವಳ್ಳಿ	50
4	ಕೆರೆಗೋಡು	23
5	ಕಿರುಗಾವಲು	30
6	ಪಾಂಡವಪುರ	24
7	ಶ್ರೀರಂಗಪಟ್ಟಣ	24
8	ಕೆ.ಆರ್. ಪೇಟೆ	25
9	ನಾಗಮಂಗಲ	46
	ಒಟ್ಟು	**332**

ಉತ್ತರ ಲಗತ್ತಿಸಿದೆ.

ಶ್ರೀಮತಿ ನಾಗಮಣಿ ಎಂ.ಕೆ. :– ಮಾನ್ಯ ಅಧ್ಯಕ್ಷರೆ, ಮಂಡ್ಯ ಜಿಲ್ಲೆಯಲ್ಲಿ ಇತ್ತೀಚೆಗೆ ಬಿದ್ದ ಮಳೆ ಹಾಗೂ ಬಿರುಗಾಳಿಗೆ ಬಿದ್ದ ವಿದ್ಯುತ್ ಕಂಬಗಳ ಬಗ್ಗೆ ವಿವರ ಕೊಟ್ಟಿದ್ದಾರೆ. ಆದರೆ ನನ್ನ ಕ್ಷೇತ್ರ ಒಂದರಲ್ಲಿ ಸುಮಾರು 80 ರಿಂದ 90 ಕಂಬಗಳು ಉರುಳಿ ಬಿದ್ದಿವೆ. ಆದರೆ ಇಲ್ಲಿ 30 ಅನ್ನು ಬದಲಾವಣೆ ಮಾಡಲಾಗಿದೆ ಎನ್ನುವ ಉತ್ತರ ಕೊಟ್ಟಿದ್ದಾರೆ. ಈ ಉತ್ತರವೂ ಕೂಡ ತಪ್ಪು. ಈಗಾಗಲೇ 65 ಕಂಬಗಳನ್ನು ಬದಲಾವಣೆ ಮಾಡಿದ್ದಾರೆ. ಇದನ್ನು 30 ರಿಂದ 40 ರವರೆಗೆ ಕಂಬಗಳನ್ನು ಬದಲಾವಣೆ ಮಾಡಬೇಕಾಗಿದೆ. ಇದರ ಜೊತೆಗೆ ಶಿಥಿಲಗೊಂಡಿರುವ ಕಂಬಗಳು ಈಗಲೋ ಆಗಲೋ ಬೀಳುವಂಥ ಕಂಬಗಳು ಸಾಕಷ್ಟು ಇವೆ. ಬಿದ್ದ ನಂತರ ಕೆಪಿಟಿಸಿಎಲ್ ನವರು ಒಂದು ಲಕ್ಷ ಪರಿಹಾರ ಕೊಡುವ ಬದಲು, ತಕ್ಷಣ ಗ್ರಾಮೀಣ ಪ್ರದೇಶಗಳಿಗೆ ಗಮನ ನೀಡಿ, ನಮ್ಮ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ಏನು ಇದೆ ಅದಕ್ಕೆ ಸರ್ಕಾರ ಆದೇಶ ಕೊಟ್ಟು ಗ್ರಾಮೀಣ ಪ್ರದೇಶದಲ್ಲಿ ಈಗಲೋ ಆಗಲೇ ಬೀಳುವಂಥ ಪರಿಸ್ಥಿತಿಯಲ್ಲಿರುವ ಕಂಬಗಳು ಎಷ್ಟು ಎಂದು ಮಾಹಿತಿ ತರಿಸಿಕೊಂಡು ಆದಷ್ಟು ಬೇಗ ಕಂಬಗಳನ್ನು ಬದಲಾವಣೆ ಮಾಡಬೇಕೆಂದು ತಮ್ಮ ಮೂಲಕ ಸರ್ಕಾರಕ್ಕೆ ನಾನು ಕೇಳಬಯಸುತ್ತೇನೆ.

ಶ್ರೀ ಪಿ.ಜಿ. ಆರ್.ಸಿಂಧ್ಯ (ಲೋಕೋಪಯೋಗಿ ಮತ್ತು ಇಂಧನ ಸಚಿವರ ಪರವಾಗಿ):– ನಾನು ಮಂಡ್ಯ ಜಿಲ್ಲೆಯಲ್ಲಿ ಮಳವಳ್ಳಿ ಮತ್ತಿತ್ತರ ಕ್ಷೇತ್ರಗಳಲ್ಲಿ ಸುಮಾರು 332 ಕಂಬಗಳನ್ನು ಬದಲಾಯಿಸಿರುವ ಅಂಕಿ ಅಂಶಗಳನ್ನು ಕೊಟ್ಟಿದ್ದೇನೆ ಇದು ನಿಜವಾದ ಅಂಕಿಅಂಶ. ಅದಲ್ಲದೇ ತಾವು ಹೇಳಿದ ಹಾಗೆ ಕೆಲವು ಬಿಟ್ಟು ಹೋಗಿವೆ. ಅದರ ಜೊತೆಗೆ ಕೆಲವು ರಿಪ್ಲೇಸ್‌ಮೆಂಟ್ ಮಾಡತಕ್ಕಂಥದ್ದು, ಮುರಿದು ಹೋಗಿರುವಂಥದ್ದು ಇದೆ. ನಾನು ನಮ್ಮ ಎನರ್ಜಿ ಸೆಕ್ರೇಟರಿಯವರಿಗೆ ಸೂಚನೆ ಕೊಟ್ಟು, ಈ ಎಲ್ಲವನ್ನು ಸಹಿತ ಎಲ್ಲೆಲ್ಲಿ ಈ ರೀತಿಯಾಗಿ ರಿಪ್ಲೇಸ್‌ಮೆಂಟ್ ಮಾಡತಕ್ಕಂಥದ್ದು ಇದೆ, ಎಲ್ಲಿ ಮುರಿದು ಹೋಗಿದೆ, ಇಂಥದ್ದನ್ನು ತುರ್ತಾಗಿ ಇದರ ಬಗ್ಗೆ ಸರ್ವೇ ಮಾಡಿಸಿ, ಎಲ್ಲಾ ಕಡೆಗಳಲ್ಲಿಯೂ ಕೂಡಲೇ ರಿಪ್ಲೇಸ್‌ಮೆಂಟ್ ಮಾಡಬೇಕೆನ್ನುವ ಸೂಚನೆ ಯನ್ನು ನಾನು ಕೊಡುತ್ತೇನೆ. ಏಕೆಂದರೆ, ಅನೇಕ ಕಡೆಗಳಲ್ಲಿ ಈ ವಿದ್ಯುತ್ ಅಪಘಾತಗಳಾಗಿ ಸತ್ತಿರತಕ್ಕಂಥದ್ದಕ್ಕೆ ನಾವು ಪರಿಹಾರ ಕೊಡಬಹುದು. ಆದರೆ,

ಸತ್ತಿರತಕ್ಕಂಥವರನ್ನು ಬದುಕಿಸಲಿಕ್ಕೆ ಆಗುವುದಿಲ್ಲ ಪ್ರಾಣ ಬಹಳ ಅಮೂಲ್ಯವಾದುದು. ಆದ್ದರಿಂದ, ಈ ಎಲ್ಲಾ ದೃಷ್ಟಿಯಿಂದ ಈ ಕಂಬಗಳನ್ನು ಬದಲಾವಣೆ ಮಾಡತಕ್ಕಂಥ ದೃಷ್ಟಿಯಲ್ಲಿ ನಮ್ಮ ಸರ್ಕಾರ ಮತ್ತು ನಮ್ಮ ವಿದ್ಯುತ್ ಇಲಾಖೆ ಇದಕ್ಕೆ ಸಂಬಂಧಪಟ್ಟ ಕಂಪನಿಗಳು ಸರಿಯಾದ ರೀತಿಯಲ್ಲಿ ಕೆಲಸ ಮಾಡಲಿಕ್ಕೆ ಆದಷ್ಟು ಬೇಗ ಇದನ್ನು ಆದ್ಯತೆಯ ಮೇರೆಗೆ ಕೆಲಸ ಮಾಡಲಿಕ್ಕೆ ನಾನು ಸೂಚನೆಯನ್ನು ಕೊಡುತ್ತೇನೆ.